V. Sri E.T. Shambunath (Minister of State for forests) : Sir, I beg to lay on the table of the house.

1. (i) 19th annual report of Karnataka Forest Development corporation Ltd., for the year 1989-90

   (ii) 5th annual report of Karnataka pulpwood Ltd., for the year 1989-90.

as required under section 619(A) of the Companies Act, 1956.

ಅಧ್ಯಕ್ಷರು: ಕಾಗದ ಪತ್ರಗಳನ್ನು ಮಂಡಿಸಲಾಯಿತು.

ಅರ್ಜಿಗಳನ್ನೊಪ್ಪಿಸುವುದು

1) ಶ್ರೀಮತಿ ಮೋಟಮ್ಮ: ಮಾನ್ಯ ಅಧ್ಯಕ್ಷರೆ, ಚಿಕ್ಕಮಂಗಳೂರು ಜಿಲ್ಲೆ, ಮೂಡಿಗೆರೆ ತಾಲ್ಲೂಕಿನ ಅಂಗಡಿ ದೇವಸ್ಥಾನದ ರಸ್ತೆ ರಿಪೇರಿ ಬಗ್ಗೆ ಅರ್ಜಿಯನ್ನೊಪ್ಪಿಸುತ್ತೇನೆ.
2) ಶ್ರೀ ಬಸವರಾಜ್: ಮಾನ್ಯ ಅಧ್ಯಕ್ಷರೆ ಬ್ರಹ್ಮಾವರ ತಾಲ್ಲೂಕಿನ ಚೌಂತಾರು ಹಾಗೂ ಹಂದಾಡಿ ಗ್ರಾಮಸ್ಥರ ಮೇಲೆ, ಮಂಡಲ ಪಂಚಾಯತ್‌ನವರು ಅತಿರೇಕದ ಮನೆ ತೆರಿಗೆಯನ್ನು ವಿಧಿಸಿರುವ ಬಗ್ಗೆ ಅರ್ಜಿಯನ್ನೊಪ್ಪಿಸುತ್ತೇನೆ.
3) ಶ್ರೀ ಎನ್. ಜಿ. ಹಾಲಪ್ಪ: ಮಾನ್ಯ ಅಧ್ಯಕ್ಷರೆ ದಾವಣಗೆರೆ ತಾಲ್ಲೂಕಿನ ಮಾಯಕೊಂಡ ಗ್ರಾಮದಲ್ಲಿ ಕರಲಳ್ಳಿ ಪಿಕಪ್ ನಾಲುವೆಯ ಪರಿಹಾರದ ಬಗ್ಗೆ ಅರ್ಜಿಯನ್ನೊಪ್ಪಿಸುತ್ತೇನೆ. ಹಾಗೂ ಕಾರವಾರದ ಗೋಬರ್ ಅನಿಲ ಯಂತ್ರ ಮೇಲ್ವಿಚಾರಕರ ವೇತನದ ಬಗ್ಗೆ ಅರ್ಜಿಯನ್ನೊಪ್ಪಿಸುತ್ತೇನೆ. ಮತ್ತು ದಾವಣಗೆರೆಯ ಪೋಲೀಸ್ ಇಲಾಖೆಯಲ್ಲಿ ಅನುಕಂಪದ ಆಧಾರದ ಮೇಲೆ ಕೆಲಸ ಕೊಡುವುದರ ಬಗ್ಗೆ ಅರ್ಜಿಯನ್ನೊಪ್ಪಿಸುತ್ತೇನೆ.

ಅಧ್ಯಕ್ಷರು: ಅರ್ಜಿಗಳನ್ನು ಒಪ್ಪಿಸಲಾಯಿತು.

ನಿಳುವಳಿ ಸೂಚನೆ

ಶ್ರೀ ಎಂ. ವೀರಪ್ಪ ಮೊಯಿಲಿ: ಸನ್ಮಾನ್ಯ ಅಧ್ಯಕ್ಷರೇ ಈ ಪ್ರಶ್ನೆ ಮೊನ್ನೆ ತಮ್ಮ ಬಿಸಿನೆಸ್ ಅಡ್‌ವೈಸರಿ ಕಮಿಟಿಯಲ್ಲಿ ಬಂದಾಗ ಇದರ ಬಗ್ಗೆ ಚರ್ಚೆ ಮಾಡಿ ಪ್ರಥಮ ಆದ್ಯತೆಯ ಮೇರೆಗೆ ಚರ್ಚೆ ಮಾಡಬೇಕೆಂದು ತೀರ್ಮಾನಕ್ಕೆ ಬಂದು ಎಲ್ಲಾ ಒಪ್ಪಂದ ಆದಮೇಲೆ ಇವತ್ತು ನಡೆಯತಕ್ಕ ಕಾರ್ಯಕಲಾಪಗಳ ವ್ಯವಹಾರದ ಪಟ್ಟಿಯಲ್ಲಿ ಚರ್ಚೆಗಾಗಿ ಹಾಕಿದ್ದೀರಿ. ಬಂದಿದ್ದ ಚರ್ಚೆಯ ಮೇಲೆ ನಿಲುವಳಿ ಸೂಚನೆ ಪ್ರಶ್ನೆ ಉದ್ಭವವಾಗುವುದಿಲ್ಲ. ಏತಕ್ಕೆಂದರೆ ಬಿಸಿನೆಸ್ ಅಡ್‌ವೈಸರಿ ಕಮಿಟಿಯಲ್ಲಿ ಆದ ತೀರ್ಮಾನಕ್ಕೆ ನಾವೆಲ್ಲಾ ಭಾಗಿಗಳಾಗಿದ್ದೇವೆ. ಅದರ ಪ್ರಕಾರ ಅಜಂಡಾದಲ್ಲಿ ಬಂದಿದೆ. ಇದರ ಬಗ್ಗೆ ಹೇಳಿಕೆ ಕೊಡಲಿಕ್ಕೆ ನಮ್ಮ ಸನ್ಮಾನ್ಯ ಕಂದಾಯ ಸಚಿವರು ಸಿದ್ಧರಾಗಿದ್ದಾರೆ. ಇವತ್ತು ಚರ್ಚೆ ಮಾಡಲು ನಾವು ಸಿದ್ಧರಿದ್ದೇವೆ.

+ ಶ್ರೀ ಬಿ.ಎಸ್. ಯಡಿಯೂರಪ್ಪ: ಸನ್ಮಾನ್ಯ ಅಧ್ಯಕ್ಷರೇ, ನಾನು ನಿಲುವಳಿ ಸೂಚನೆಯ ಮೂಲಕ ಬರಗಾಲಕ್ಕೆ ತುತ್ತಾಗಿ ಈಗಾಗಲೇ ಕಣ್ಣೀರಿನಲ್ಲಿ ಕೈ ತೊಳಿಯುತ್ತಿರುವಂತಹ ರೈತರ ಸಮಸ್ಯೆಯ ಬಗ್ಗೆ ಸದನದಲ್ಲಿ ಚರ್ಚಿಸಿದಾಗ ರೈತರ ಸಾಲದ ವಸೂಲಾತಿಯನ್ನು ಮಾರ್ಚ್ ಕೊನೆಯವರೆಗೆ ವಸೂಲು ಮಾಡದಂತೆ ತಡೆ ಆಜ್ಞೆ ಕೊಟ್ಟಿದ್ದೇವೆ. ಸಾಲ ಮನ್ನಾ ಮಾಡುವುದರ ಬಗ್ಗೆ ಸನ್ಮಾನ್ಯ ಮುಖ್ಯ ಮಂತ್ರಿಗಳು ಪ್ರಧಾನಿಯವರಿಗೆ ಪತ್ರ ಬರೆದಿದ್ದಾರೆಂದು ಹೇಳಿದರು. ರೈತರ ಸಾಲ ಮನ್ನಾ ಮಾಡುವುದರ ಬಗ್ಗೆ ಕೆಲವು ಕಂಡೀಷನ್ ಇದೆ. ಮಾನ್ಯ ಮುಖ್ಯ ಮಂತ್ರಿಗಳು ಪತ್ರ ಬರೆದಿದ್ದಾರೋ ಮಾನ್ಯ ಪ್ರಧಾನ ಮಂತ್ರಿಗಳಿಂದ ಉತ್ತರ ಏನೂ ಬಂತು

ಎನ್ನುವುದು ಗೊತ್ತಿಲ್ಲ. ಸಾಲ ಮನ್ನಾ ಮಾಡುವುದರ ಬಗ್ಗೆ ಸರ್ಕಾರದ ನಿಲುವು ಇನ್ನೂ ಸ್ಪಷ್ಟವಾಗಿಲ್ಲ. ಅದಕ್ಕೋಸ್ಕರ ಇಂತಹ ಒಂದು ವಿಚಿತ್ರವಾದ ಪರಿಸ್ಥಿತಿಯಲ್ಲಿ ಕೇಂದ್ರ ಸರ್ಕಾರ ಇವತ್ತು ಬ್ಯಾಂಕುಗಳಿಂದ ಸಾಲ ಪಡೆದು ಸಾಲ ಮನ್ನಾ ಮಾಡುವ ಸಂದರ್ಭದಲ್ಲಿ, ಕರ್ನಾಟಕ ರಾಜ್ಯ ಬ್ಯಾಂಕಿಗೆ ಸಂಬಂಧಪಟ್ಟ ಯಾವುದೇ ಒಂದು ವಿಚಾರದಲ್ಲಿ ಪ್ರಸ್ತಾಪವಾಗಿಲ್ಲ. ಹೀಗಾದರೆ ಇವತ್ತು ರಾಜ್ಯ ಸರ್ಕಾರದಿಂದ ರಾಜ್ಯದ ರೈತರ ಸಾಲ ಮನ್ನಾ ಮಾಡುವುದರ ಬಗ್ಗೆ ಕೇಂದ್ರ ಸರ್ಕಾರದಲ್ಲಿ ಏನು ಕಂಡೀಷನ್ ವಿಧಿಸಿತು ಆ ಕಂಡೀಷನ್ ತೆಗೆದು ಹಾಕಿ ಅವನನ್ನು ಋಣಮುಕ್ತನನ್ನಾಗಿ ಮಾಡುವುದಕ್ಕಾಗಿ ಸರ್ಕಾರ ಏನು ನಿಲುವು ತೆಗೆದುಕೊಂಡಿದೆ, ಎಂಬುದು ಸ್ಪಷ್ಟವಾಗಿಲ್ಲ. ನಾನು ತಮ್ಮನ್ನು ಈ ಮೂಲಕ ವಿನಂತಿ ಮಾಡುವುದು ಇಷ್ಟೆ. ಸನ್ಮಾನ್ಯ ಮುಖ್ಯ ಮಂತ್ರಿಗಳು ಪ್ರಧಾನಿಯವರಿಗೆ ಏನು ಪತ್ರ ಬರೆದಿದ್ದಾರೆ ಆ ಪತ್ರಕ್ಕೆ ಪ್ರಧಾನಿಯವರಿಂದ ಏನು ಉತ್ತರ ಬಂದಿದೆ? ಸರ್ಕಾರದ ನಿಲುವು ಏನು? ಇದರ ಬಗ್ಗೆ ಸ್ಪಷ್ಟವಾಗಿ ಒಂದು ಚರ್ಚೆ ಆಗಬೇಕಾಗಿದೆ. ಬರಗಾಲಕ್ಕೆ ತುತ್ತಾಗಿರುವ ಪ್ರದೇಶಗಳ ಸಾಮಾನ್ಯ ರೈತರು ಇವತ್ತು ತಮ್ಮ ಸಾಲ ಮನ್ನಾ ಮುಖ್ಯ ಮಂತ್ರಿಗಳ ಹೇಳಿಕೆ ಪ್ರಕಾರ ಆಗುತ್ತದೆಂದು ಕಾದಿದ್ದಾರೆ. ಇವತ್ತು ಚರ್ಚೆ ಸದನದ ವಿಚಾರದ ಆಧಾರದ ಮೇಲೆ ಅವನನ್ನು ಋಣ ಮುಕ್ತನನ್ನಾಗಿ ಮಾಡಿದರೆ ಮುಂದಿನ ಮಳೆಗಾಲದಲ್ಲಾದರೂ ಒಂದಿಷ್ಟು ಬೆಳೆ ಬೆಳೆದು ಗೌರವದಿಂದ ಜೀವನ ಮಾಡಬಹುದು. ಅಂತಹ ಆಸೆಯನ್ನು ಇಟ್ಟುಕೊಂಡಿದ್ದಾರೆ. ಇಂತಹ ಒಂದು ಸಂದರ್ಭದಲ್ಲಿ ನಾನು ಇಲ್ಲಿಂದ ನಿಯೋಗ ತೆಗೆದುಕೊಂಡು ಹೋಗಬೇಕಂದು ತಿಳಿಸಿದ್ದೆ ಮಾನ್ಯ ಮುಖ್ಯಮಂತ್ರಿಗಳು ಅದಕ್ಕೆ ಒಪ್ಪಲಿಲ್ಲ. ಕೇಂದ್ರ ಸರ್ಕಾರ ಈಗಿರುವಂಥ ಕಂಡೀಷನ್ ತೆಗೆದುಹಾಕಬೇ ಇದ್ದರೆ ರೈತರು ಉಳಿಯುವುದಿಲ್ಲ. ಸ್ವಾಮಿ ಈಗ ಮಾರ್ಚ್ ಕೊನೆಯವರೆಗೆ ಬಂದಿದ್ದೇವೆ. ಏಪ್ರಿಲ್ 1 ರಂದು ಮತ್ತೆ ಅವರಿಂದ ಸಾಲ ವಸೂಲು ಮಾಡುವಂತಹ ಪ್ರಸಂಗ ಬರಬಹುದು. ಬರಗಾಲಕ್ಕೆ ತುತ್ತಾದ ರೈತ ಕಂಗಾಲಾಗಿರುವ ಈ ಸಂದರ್ಭದಲ್ಲಿ ಪ್ರಧಾನಿಯವರಿಗೆ ಏನು ಪತ್ರ ಬರೆದಿದ್ದೀರಿ, ಪ್ರಧಾನಿಯವರಿಂದ ಏನು ಉತ್ತರ ಬಂತು. ಸರ್ಕಾರ ಮುಂದೆ ಏನು ಮಾಡಬೇಕೆಂದಿದೆ. ಅಥವಾ ಕೇಂದ್ರ ಸರ್ಕಾರ ನಂಬಿಕೊಂಡು ಕಾಯ್ದುಕೊಂಡು ಕುಳಿತುಕೊಳ್ಳುವುದರ ಬದಲಾಗಿ ರಾಜ್ಯ ಸರ್ಕಾರದಿಂದ ಏನಾದರೂ ತುಂಬಿಕೊಡಬೇಕು. ಸಾಲ ಮನ್ನಾ ಮಾಡುವುದಕ್ಕೆಂದು ಮುಂದೆ ಬರುವುದಿದೆಯೇ ಅಥವಾ ಕೇಂದ್ರ ಸರ್ಕಾರಕ್ಕೆ ಬೆಂಬಲ ಕೊಟ್ಟು ಪ್ರಧಾನಿಯವರಿಗೆ ಮನವೊಲಿಸಿ ರೈತನನ್ನು ಋಣಮುಕ್ತನನ್ನಾಗಿ ಮಾಡಲು ಹೆಜ್ಜೆ ಇಡುತ್ತೀರಾ, ಏನು ಪತ್ರ ವ್ಯವಹಾರ ಆಗಿದೆಯೋ ಅದನ್ನು ಸದನದ ಮುಂದೆ ಇಟ್ಟರೆ ಚರ್ಚೆ ಮಾಡುವುದಕ್ಕೆ ಅನುಕೂಲವಾಗಬಹುದು. ಬರಗಾಲದ ಬಗ್ಗೆ ಚರ್ಚೆಯಾಗುವಂತಹ ಸಂದರ್ಭದಲ್ಲಿ ರೈತನ ಸಾಲ ಮನ್ನಾ ಮಾಡುವ ಬಗ್ಗೆ ಸರ್ಕಾರದ ನಿಲುವು ಏನು ಎಂಬುದು ಸ್ಪಷ್ಟ ಆದರೆ ಎರಡನ್ನೂ ವಿಶೇಷವಾದ ರೀತಿಯಲ್ಲಿ ಚರ್ಚೆ ಮಾಡುವುದಕ್ಕೆ ಅನುಕೂಲವಾಗುತ್ತದೆ. ಅದಕ್ಕೋಸ್ಕರ ನಿಲುವಳಿ ಸೂಚನೆ ಮೂಲಕ ಚರ್ಚೆ ಮಾಡುವುದಕ್ಕೆ ಅವಕಾಶ ಕೊಡಬೇಕು. ಇದು ಅತ್ಯಂತ ಮಹತ್ತರವೆಂಬ ವಿಷಯ ಕಳೆದ ಒಂದು ವರ್ಷದಿಂದ ರೈತರಿಗೆ ನಾವು ಒಂದು ರೀತಿಯಲ್ಲಿ ಅನ್ಯಾಯ ಮಾಡಿಕೊಂಡು ಬರುತ್ತಿದ್ದೇವೆ. ಚರ್ಚೆ ಅವಕಾಶ ಕೊಡಬೇಕೆಂದು ಒತ್ತಾಯ ಮಾಡುತ್ತಿದ್ದೇನೆ.

ಶ್ರೀ ಕೆ.ಹೆಚ್. ಪಾಟೀಲ್: ಮಾನ್ಯ ಯಡಿಯೂರಪ್ಪನವರು ಈ ವಿಷಯವನ್ನು ಸದನ ಪ್ರಾರಂಭವಾದಾಗಿನಿಂದ ಇಲ್ಲಿಯತನಕವೂ ಎತ್ತುತ್ತಲೇ ಇದ್ದಾರೆ. ಇದು ನಿಲುವಳಿ ಸೂಚನೆ ಹೇಗೆ ಆಗುತ್ತದೆ. ಇದು ಮಾನ್ಯ ಸದಸ್ಯರಿಗೆ ಬಿಟ್ಟದ್ದುದು. ವಿತಕ್ಕೆಂದರೆ ಯಾವಾಗಲೂ ನಿಲುವಳಿ ಸೂಚನೆ ವಿಷಯ ಹೊಸದಾಗಿ ಇರಬೇಕು. ಇಲ್ಲಿ ವಿಚಾರ ಮಾಡದೇ ಇರಬೇಕು. ಮಾನ್ಯ ಮುಖ್ಯಮಂತ್ರಿಯವರು ಪ್ರಧಾನ ಮಂತ್ರಿಯವರಿಗೆ ಪತ್ರ ಬರೆದಿದ್ದಾರೆ. ಅವರಿಂದ ಉತ್ತರ ಬಂದರೆ ಡಿಸ್ಕೈಡ್ ಆಗುತ್ತದೆ. ನನ್ನ

ಅಭಿಪ್ರಾಯವನ್ನು ಸ್ಪಷ್ಟವಾಗಿ ಹೇಳುತ್ತೇನೆ. ಮಾರ್ಚ್‌ತನಕ ಮಾನ್ಯ ಮುಖ್ಯಮಂತ್ರಿಯವರು ಮತ್ತು ನಮ್ಮ ಭಾಗದ ಅನೇಕ ಸದಸ್ಯರು ಸಹ ರೈತರ ಹಿತದೃಷ್ಟಿಯಿಂದ ಸಾಲ ವಸೂಲಿ ಮಾಡುವುದು ಬೇಡವೆಂದು ಒತ್ತಾಯ ಮಾಡಿದ್ದರಿಂದ ಮುಂದಕ್ಕೆ ಹಾಕಲಾಗಿತ್ತು. ಪ್ರಧಾನ ಮಂತ್ರಿಯವರಿಂದ ಉತ್ತರ ಮಾರ್ಚ್ ಒಳಗೆ ಬರದಿದ್ದರೆ ಒತ್ತಾಯದಿಂದ, ಕಡ್ಡಾಯವಾಗಿ ಸಾಲ ವಸೂಲಿ ಕೆಲಸ ಮಾಡಲಾಗುವುದು.

ಶ್ರೀ ಬಿ.ಎಸ್. ಯಡಿಯೂರಪ್ಪ: ಇಲ್ಲಿಯ ವರೆಗೆ ಉತ್ತರ ತರುವುದಕ್ಕೆ ಪ್ರಧಾನಿಯವರ ಜೊತೆ ನೇರವಾದ ಮಾತುಕತೆ ನಡೆಸಿಲ್ಲ, ಇದೊಂದು ಜವಾಬ್ದಾರಿಯಿಂದ ಕೊಡುವ ಉತ್ತರವೇ ಸ್ವಾಮಿ. ಪ್ರಧಾನಿಯವರಿಗೆ ಪತ್ರ ಬರೆದರೆ ಉತ್ತರ ಬಂದಿತೋ ಎಂದು ಗೊತ್ತಿಲ್ಲ. ಅಥವಾ ಮಾರ್ಚ್ ಕೊನೆಯವರೆಗೆ ನಾವು ಕಾಯುತ್ತೇವೆ, ಉತ್ತರ ಒರದೇ ಇದ್ದರೆ ರೈತರ ಸಾಲ ವಸೂಲಿ ಮಾಡುತ್ತೇವೆ ಎಂದು ಹೇಳುವುದು ಇದು ಒಂದು ಜವಾಬ್ದಾರಿಯುತ ಸರ್ಕಾರ ಹೇಳುವ ಮಾತೇನು?

ಶ್ರೀ ಕೆ.ಹೆಚ್. ಪಾಟೀಲ್: ಸನ್ಮಾನ್ಯ ಅಧ್ಯಕ್ಷರೇ, ನಾನು ಅವರಲ್ಲಿ ವಿನಂತಿ ಮಾಡಿಕೊಳ್ಳುವುದು ಏನೆಂದರೆ ಈ ಸದನದಲ್ಲಿ ಎಲ್ಲರಿಗೂ ಈ ಬಗ್ಗೆ ಕಳಕಳಿ ಇದೆ. ಸನ್ಮಾನ್ಯ ಮುಖ್ಯಮಂತ್ರಿಗಳು ಕೇಂದ್ರ ಸರ್ಕಾರ ಈಗಿರುವಂತಹ ಕಂಡೀಷನ್‌ಗಳಿಂದ ಈ ಷರತ್ತಿನಿಂದ ರೈತನ ಸಾಲ ಮನ್ನಾವಾಗುವುದಿಲ್ಲ, ಅನುಕೂಲವಾಗುವುದಿಲ್ಲ. ಈ ಕಂಡೀಷನ್ ತೆಗೆದುಹಾಕವುದಕ್ಕೆ ಪತ್ರ ಬರೆದಿದ್ದೇವೆ ಎಂದು ಹೇಳಿದರೆ ಪ್ರತ್ಯೇಕವಾಗಿ ಇವರು ಅವರನ್ನು ಭೇಟಿ ಮಾಡಬೇಕಾಗುತ್ತದೆ.

ಅಧ್ಯಕ್ಷರೆ, ನಾನು ಪ್ರಧಾನಮಂತ್ರಿಯವರಿಗೂ ಮತ್ತು ದೇವಿಲಾಲ್‌ರವರಿಗೂ ಭೇಟಿಯಾಗಿ ಹೇಳಿದ್ದೇನೆ. ಅವರು ಮಾಡದೇ ಇದ್ದರೆ ನಾವು ಏನು ಮಾಡಲಿಕ್ಕೆ ಆಗುತ್ತದೆ ಹೇಳಿ. ಮಾನ್ಯ ಸದಸ್ಯರು ಹೋಗಿ ಪ್ರಯತ್ನ ಮಾಡುವುದಾದರೆ ಅವರು ಪ್ರಯತ್ನ ಮಾಡಲಿ.

ಶ್ರೀ ಬಿ.ಎಸ್. ಯಡಿಯೂರಪ್ಪ ; ಅಧ್ಯಕ್ಷರೆ, ಸನ್ಮಾನ್ಯ ಸಚಿವರು ಏನು ಹೇಳಿದರು ಅಂದರೆ, ನನ್ನ ದೃಷ್ಟಿಯಿಂದ ಸಾಲ ಮನ್ನಾ ಮಾಡುವುದು ಒಪ್ಪಿಗೆ ಇಲ್ಲ ಎಂದು ಅಂದರೆ, ಇನ್ನೊಂದು ಕಡೆ ಸರ್ಕಾರದ ಒಬ್ಬ ಮುಖ್ಯಮಂತ್ರಿಗಳು ರೈತನ ಸಾಲ ಮನ್ನಾ ಮಾಡುವಂಥಾದ್ದು ಅಗತ್ಯ ಇದೆ. ಕೇಂದ್ರ ಸರ್ಕಾರ ಹಾಕಿರುವಂಥ ಕಂಡೀಷನ್ ಸರಿಯಲ್ಲ, ನಾನು ಪ್ರಧಾನಿಯವರ ಗಮನ ಸೆಳೆಯುವುದಕ್ಕೆ ಪತ್ರ ಬರೆಯುತ್ತೇನೆಂದು ಹೇಳುತ್ತಾರೆ. ಇವರು ನಾನು ಏಪ್ರಿಲ್ ತಿಂಗಳಿಂದ ಸಾಲ ವಸೂಲಿ ಮಾಡುತ್ತೇನೆಂದು ಹೇಳುವಂಥ ಈ ಇಬ್ಬಗೆಯ ಉತ್ತರಗಳು ಏನು ಬರುತ್ತಿವೆ ಇದರಿಂದ ರೈತ ಸಮುದಾಯಕ್ಕೆ ದ್ರೋಹ ಬಗೆದಂತಾಗುವುದಿಲ್ಲವೇ? ಇದು ಮಾನ್ಯ ಸಹಕಾರ ಸಚಿವರ ವೈಯಕ್ತಿ ಅಭಿಪ್ರಾಯವೇ, ಹಾಗಾದರೆ ಸರ್ಕಾರದ ನಿಲುವು ಏನು ಎಂದು ಕೇಳುತ್ತೇನೆ.

ಶ್ರೀ ಡಿ.ಬಿ. ಚಂದ್ರೇಗೌಡ: ಈಗ ನಿಮ್ಮ ಸರ್ಕಾರ ಇದೆ ಸ್ವಾಮಿ:

(ಗೊಂದಲ)

ಶ್ರೀ ಕೆ.ಹೆಚ್. ಪಾಟೀಲ್: ಸರ್ಕಾರ ಬದಲಾವಣೆಯಾಗಿಲ್ಲ, ನಾವು ಸಹಾಯ ಮಾಡುವುದು ಮಾಡುತ್ತೇವೆ.

(ಗೊಂದಲ)

ಶ್ರೀ ಕೆ.ಎಸ್. ಈಶ್ವರಪ್ಪ: ಅಧ್ಯಕ್ಷರೆ, ಪ್ರಧಾನ ಮಂತ್ರಿಗಳದ್ದು ಒಂದು ರಾಗ, ಮಾನ್ಯ ಸಹಕಾರ ಮಂತ್ರಿಗಳದ್ದು ಮತ್ತೊಂದು ರಾಗ. ಈ ಎರಡು ರಾಗಗಳಲ್ಲಿ ನಾವು ಯಾವ ರಾಗವನ್ನು ಒಪ್ಪಿಕೊಳ್ಳಬೇಕು. ರೈತ ಹಾಳಾಗಿ ಹೋಗುತ್ತಿದ್ದಾನೆ. ರಾಜ್ಯದ ರೈತರಿಗೆ ದ್ರೋಹ ಮಾಡಿದಂತಾಗುತ್ತಿದೆ. ಈ ಎರಡು ರಾಗಗಳು

ಹೊಂದಾಣಿಕೆಯಾಗುವುದು ಯಾವಾಗ ಎಂಬುದನ್ನು ತಿಳಿಸಬೇಕು. ಮಾನ್ಯ ಮಂತ್ರಿಗಳು ಇದರ ಬಗ್ಗೆ ಉತ್ತರ ಕೊಡಬೇಕು.

ಶ್ರೀ ಬಿ.ಎಸ್. ಯಡಿಯೂರಪ್ಪ: ಅಧ್ಯಕ್ಷರೆ, ಮಾನ್ಯ ಮಂತ್ರಿಗಳು ಈ ರೀತಿಯಲ್ಲಿ ಉತ್ತರ ಕೊಡುವುದು ರಾಜ್ಯದ ರೈತರಿಗೆ ದ್ರೋಹ ಮಾಡಿದಂತಾಗುತ್ತದೆ. ಒಂದು ಸಾರಿ ಮಾನ್ಯ ಮುಖ್ಯಮಂತ್ರಿಗಳಿಗೆ ಮನದಟ್ಟಾಗಿ ಈ ಕಂಡೀಷನ್‌ನಿಂದ ರಾಜ್ಯದ ರೈತರಿಗೆ ಅನುಕೂಲವಾಗುವುದಿಲ್ಲ, ರೈತ ಬರಗಾಲಕ್ಕೆ ತುತ್ತಾಗಿದ್ದಾನೆ ಎಂದು ಸ್ಪಷ್ಟಪಡಿಸಿ ಹೇಳಿದ ಮೇಲೆ ನಿಮ್ಮ ಪ್ರಾಮಾಣಿಕ ಕಳಕಳಿ ಏನು ಸರ್ಕಾರದಿಂದ ಒಂದು ಪತ್ರ ಬರೆದರೆ ತಮ್ಮ ಜವಾಬ್ದಾರಿ ಮುಗಿದಂತಾಯಿತೇನು. ಒಂದು ನಿಯೋಗ ತೆಗೆದುಕೊಂಡು ಹೋಗುವುದಕ್ಕೆ ತಾವು ಒಪ್ಪಿಗೆ ಕೊಡಲಿಲ್ಲ.

(ಗೊಂದಲ)

ಶ್ರೀ ಕೆ.ಹೆಚ್. ಪಾಟೀಲ್: ನಿಮಗೆ ಕೇಳುವಂಥ ಸೌಜನ್ಯ ಬೇಕು. ನಿಮಗೆ ಬೇಕಾಗಿರುವುದು ಪ್ರಚಾರ.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ: ಯಾವ ಪ್ರಚಾರ ಹೇಳಿ ಸ್ವಾಮಿ. ಅಧ್ಯಕ್ಷರೆ, ಈ ಸದನದಲ್ಲಿ ಪ್ರಮುಖವಾದಂಥ ವಿಚಾರವನ್ನು ಪ್ರಸ್ತಾಪ ಮಾಡುವ ಬಗ್ಗೆ ಪ್ರಚಾರಕ್ಕೋಸ್ಕರ ಮಾಡುತ್ತಿದ್ದಾರೆಂದರೆ ನಾವು ಏನು ಹೇಳಬೇಕು. ನಾನು ಒಬ್ಬ ರೈತನ ಮಗನಾಗಿ, ಶಾಸಕನಾಗಿ ನನ್ನ ಕರ್ತವ್ಯ ಮಾಡುತ್ತಿದ್ದೆನೆ. ಪ್ರಚಾರಕ್ಕೋಸ್ಕರ ನಾನು ಮಾತನಾಡುತ್ತಿಲ್ಲ.

(ಗೊಂದಲ)

ಶ್ರೀ ಕೆ.ಎಸ್. ಈಶ್ವರಪ್ಪ: ಅಧ್ಯಕ್ಷರೆ, ಮಾನ್ಯ ಮಂತ್ರಿಗಳು ಹೇಳಿರುವಂಥ ಮಾತನ್ನು ಅವರು ವಾಪಸ್ಸ ತೆಗೆದುಕೊಳ್ಳಬೇಕು.

(ಗೊಂದಲ)

ಶ್ರೀ ಕೆ.ಹೆಚ್. ಪಾಟೀಲ್ : ಅಧ್ಯಕ್ಷರೆ, ನಾನು ಮತ್ತೊಂದು ಸಾರಿ ರಿಪೀಟ್ ಮಾಡಿ ಹೇಳುತ್ತೇನೆ.

(ಗೊಂದಲ)

ಶ್ರೀ ಕೆ.ಎಸ್. ಈಶ್ವರಪ್ಪ: ಅಧ್ಯಕ್ಷರೆ, ಮಾನ್ಯ ಮಂತ್ರಿಗಳ ಮಾತು ಬೇಜವಾಬ್ದಾರಿಯ ಮಾತು ಎಂದು ಹೇಳಬೇಕಾಗುತ್ತದೆ. ಮಾನ್ಯ ಮುಖ್ಯ ಮಂತ್ರಿಗಳು ಒಂದು ಮಾತು ಆಡುತ್ತಿದ್ದಾರೆ, ಸಹಕಾರ ಮಂತ್ರಿಗಳು ಒಂದು ಮಾತು ಆಡುತ್ತಿದ್ದಾರೆ.

(ಗೊಂದಲ)

ಶ್ರೀ ಕೆ.ಹೆಚ್. ಪಾಟೀಲ್: ನಿಮಗೆ ಕೇಳುವ ಸೌಜನ್ಯ ಇರಬೇಕು

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ: ಇವ್ರೊತ್ತು ಚಂದ್ರಶೇಖರ್ ಸರ್ಕಾರ ಅಂದರೆ ಕಾಂಗ್ರೆಸ್ ಸರ್ಕಾರ. ಆದ್ದರಿಂದ, ತಾವು ಇದರ ಬಗ್ಗೆ ವಿಚಾರ ಮಾಡಬೇಕು.

(ಗೊಂದಲ)

ಶ್ರೀ ಕೆ.ಹೆಚ್. ಪಾಟೀಲ್: ಮುಖ್ಯಮಂತ್ರಿಗಳು ಈಗಾಗಲೇ ಕೇಂದ್ರಕ್ಕೆ ಪತ್ರ ಬರೆದಿದ್ದಾರೆ. ಆ ಪತ್ರದ ಪ್ರಕಾರವಾಗಿ ಉತ್ತರ ಬರತಕ್ಕ ದಾರಿಯನ್ನು ನಾವು ಕಾಯತ್ತಿದ್ದೇವೆ. ಈ ವಿಚಾರದಲ್ಲಿ ಸ್ವತಃ ಮಾನ್ಯ ಮುಖ್ಯ ಮಂತ್ರಿಗಳು ಭೇಟಿಯಾಗಿ ಚರ್ಚೆ ಮಾಡಿದ್ದಾರೆ, ನಾನೂ ಸಹ ಸ್ವತಃ ಪ್ರಧಾನ ಮಂತ್ರಿಗಳಿಗೆ ಭೇಟಿಯಾಗಿ

ಹೇಳಿದ್ದೇನೆ. ಮಾನ್ಯ ದೇವಿಲಾಲ್‌ರವರ ಜೊತೆ ಕೂಡ ಮಾತನಾಡಿ ನೀವು ಮಾಡಿದಂಥ ಯೋಜನೆಯಿಂದ ರೈತರಿಗೆ ಸಫಲವಾಗಲಿಲ್ಲ, ಕೇವಲ ಮುರ್‌ದಾರರಿಗೆ ಮಾತ್ರ ಮುಟ್ಟಿದೆ. ಅವರೂ ಸಹಿತ ರೊಕ್ಕ ಕೇಳುತ್ತಿದ್ದಾರೆ. ನಬಾರ್ಡ್‌ನವರು ಹಣ ಕೊಟ್ಟರೆ ಮಾತ್ರ ಅವರಿಗೆ ಸಾಲ ಕೊಡಲಿಕ್ಕೆ ಆಗುತ್ತದೆ ಇಲ್ಲದೇ ಇದ್ದರೆ ಆಗುವುದಿಲ್ಲ ಎಂದು ಹೇಳಿದ್ದೇನೆ. ಪತ್ರ ಬರೆದು ಕೊಟ್ಟಿದ್ದೇವೆ. ಎರಡು ಸಾರಿ ಭೇಟಿಯಾಗಿ ಹೇಳಿದ್ದೇನೆ.

ಶ್ರೀ ಡಿ.ಬಿ. ಚಂದ್ರೇಗೌಡ:ಕರ್ನಾಟಕ ರಾಜ್ಯವನ್ನು ಹೊರತುಪಡಿಸಿ, ಇಂಡಿಯಾ ದೇಶದ ಎಲ್ಲಾ ರಾಜ್ಯಗಳು, ಕೇಂದ್ರ ಸರ್ಕಾರದ ಒಂದು ಸಾಲ ನೀತಿ ಏನಿದೆ ಇದರ ಲಾಭವನ್ನು ಪಡೆದಿರುವಂಥದ್ದು ತಮ್ಮ ಗಮನಕ್ಕೆ ಬಂದಿದೆಯೇ?

ಶ್ರೀ ಕೆ.ಹೆಚ್. ಪಾಟೀಲ್: ಮಧ್ಯಪ್ರದೇಶದವರು ಮಾತ್ರ ಕೇಂದ್ರ ಸರ್ಕಾರಕ್ಕೆ ಒತ್ತಾಯಮಾಡಿ, ನಮ್ಮ ಸಹಾಯ ಬೇಕಾದರೆ ನೀವು ಹಣ ಕೊಡಿ ಎಂದು ಹೇಳಿ ಹಣ ತೆಗೆದುಕೊಂಡು ಹೋಗಿದ್ದಾರೆಂದು ಕೇಳಿದ್ದೇನೆ.

ಶ್ರೀ ಕೆ.ಎಸ್. ಈಶ್ವರಪ್ಪ: ನೀವು ಮಾಡಿ...

(ಗೊಂದಲ)

ಶ್ರೀ ಕೆ. ಹೆಚ್. ಪಾಟೀಲ್: ಪಕ್ಷದ ಸಲುವಾಗಿ ದೇಶದ ಹಣವನ್ನು ದೋಚುತ್ತೀರೆಂದು ಹೇಳಿದರು. ನಾವು ಒತ್ತಾಯ ಮಾಡುತ್ತೇವೆ. ಎಲ್ಲಾ ಕಡೆ...

ಶ್ರೀ ಬಿ. ಎಸ್. ಯಡಿಯೂರಪ್ಪ: ಹಣವನ್ನು ಕೇಳಿದರೆ ಅದು ಹಣವನ್ನು ದೋಚಿದಂತೆ ಆಗುತ್ತದೆಯೇ? ಈ ರಾಜ್ಯದ ರೈತನನ್ನು ಉಳಿಸುವುದಕ್ಕೆ ಈ ಸರ್ಕಾರದಿಂದ ಬೆಂಬಲವನ್ನು ಕೊಡುತ್ತಿರುವುದು. ಮಧ್ಯ ಪ್ರದೇಶದ ಬಿ.ಜೆ.ಪಿ.ಯವರು ಯಾವ ರೀತಿ ಪ್ರಧಾನ ಮಂತ್ರಿಗಳಿಂದ ಹಣವನ್ನು ತಂದರೋ ಅದೇ ರೀತಿ ನೀವೂ ಹಣವನ್ನು ತನ್ನಿ. ರೈತನನ್ನು ಋಣಮುಕ್ತನನ್ನಾಗಿ ಮಾಡಿ.

(ಗೊಂದಲ)

ಶ್ರೀ ಕೆ. ಹೆಚ್. ಪಾಟೀಲ್ : ನಿಮ್ಮ ಅಭಿಪ್ರಾಯವೇ ನಮ್ಮ ಅಭಿಪ್ರಾಯವೂ ಆಗಬೇಕೇನು? ಅದು ಸಾಧ್ಯವಿಲ್ಲ. ನನ್ನ ಅಭಿಪ್ರಾಯ ಬೇರೆ ಇದೆ.

(ಗೊಂದಲ)

ಶ್ರೀ ಕೆ. ಹೆಚ್. ಪಾಟೀಲ್: ಆಗ ಏತಕ್ಕೆ ಕೊಡಿಸಲಿಲ್ಲ. ಈಗ ನಾವು ಸಹಾಯ ಮಾಡುವಾಗ ನೀವು ಬಂದಿದ್ದೀರಿ. ಇದೇ ನಿಮ್ಮ ದೇವಿಲಾಲ್‌ರಿಗೆ ಸಹಾಯ ಮಾಡುವಾಗ ನಿಮಗೆ ಏನಾಗಿತ್ತು?

(ಗೊಂದಲ)

ಶ್ರೀ ಬಿ. ಎಸ್. ಯಡಿಯೂರಪ್ಪ: ಹೋರಾಟ ಮಾಡಲು ನಾವು ನಿಮ್ಮ ಜೊತೆ ಬರುವುದಕ್ಕೆ ಸಿದ್ಧವಾಗಿದ್ದೇವೆ. ಅವತ್ತು ಮಾನ್ಯ ವೀರೇಂದ್ರ ಪಾಟೀಲರು ಹೇಳಿದಾಗ...

(ಗೊಂದಲ)

ಶ್ರೀ ಬಿ. ಎಸ್. ಯಡಿಯೂರಪ್ಪ: ಈ ಸದನದಲ್ಲಿ ಚರ್ಚೆಯಾಗಿದೆ. ನಾವು ಹೋರಾಟ ಮಾಡುವುದಕ್ಕೆ ನಿಮ್ಮ ಜೊತೆ ಬರುತ್ತೇವೆಂದು ನಾವು ಹೇಳಿದ್ದೇವೆ...

ಅಧ್ಯಕ್ಷರು: ಆರ್ಡರ್, ಆರ್ಡರ್...

SRI K. H. PATIL: We are anxiously waiting a favourable reply from the Central Government.

SRI R. V. DESHPANDE: How long?

SRI K. H. PATIL: If they give a reply, it is alright, otherwise our date will expire on March, 31st. We will have to recover.

ಶ್ರೀ ಬಿ. ಎಸ್. ಯಡಿಯೂರಪ್ಪ: ಇದು ಸರಿಯಲ್ಲ.

ಶ್ರೀ ವಾಟಾಳ್ ನಾಗರಾಜ್: ಇದು ರೈತನ ಮೂಗಿಗೆ ತುಪ್ಪ ಹಚ್ಚಿದಂತಾಗುತ್ತದೆ. ಇದು ಒಳ್ಳೆಯದಲ್ಲ. ಸರ್ಕಾರ ಒಂದು ನಿರ್ಧಾರಕ್ಕೆ ಬರಬೇಕು.

ಶ್ರೀ ಕೆ. ಎಸ್. ಈಶ್ವರಪ್ಪ: ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಉತ್ತರ ಬೇಜವಾಬ್ದಾರಿ ಮಾತಾಗುತ್ತದೆ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್: ದೇಶದ ರೈತರ ಸಮಸ್ಯೆಯನ್ನು ಬಗೆಹರಿಸಬೇಕೆಂಬ ಒಂದು ನಿರ್ಧಾರಕ್ಕೆ ಸರ್ಕಾರ ಬರಬೇಕು. ಈಗಿನ ಸರ್ಕಾರದ ನೀತಿ ಸರಿಯಾದ ನೀತಿಯಲ್ಲ. ನಾವು ಸಾಲವನ್ನು ವಸೂಲ್ಮಾಡುತ್ತೇವೆಂದು ಹೇಳತಕ್ಕದ್ದು ಸರಿಯಲ್ಲ. ಸರ್ಕಾರದ ಈ ನೀತಿಯನ್ನು ವಿರೋಧಿಸಿ ನಾವು ಸಭಾತ್ಯಾಗವನ್ನು ಮಾಡಬೇಕಾಗುತ್ತದೆ. ಇದನ್ನು ಬಿಟ್ಟು ಬೇರೆ ಮಾತೇ ಇಲ್ಲ. ಸರ್ಕಾರ ಪರಿಣಾಮಕಾರಿಯಾದ ನಿಲುವನ್ನು ತಾಳಬೇಕಾಗುತ್ತದೆ.

ಶ್ರೀ ಆರ್. ವಿ. ದೇಶಪಾಂಡೆ: ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯ ಮಂತ್ರಿಗಳು ಹೋದ ಕಡೆಯಲ್ಲೆಲ್ಲಾ ಹೇಳುತ್ತಿದ್ದಾರೆ, 10 ಸಾವಿರ ರೂಪಾಯಿವರೆಗಿನ ಸಾಲವನ್ನು ಮನ್ನಾ ಮಾಡುತ್ತೇವೆ, ಯಾರೂ ಕೂಡ 10 ಸಾವಿರ ರೂ. ನೊಳಗಿರುವವರು ಸಾಲವನ್ನು ಮರುಪಾವತಿ ಮಾಡಬೇಕಾದ ಅವಶ್ಯಕತೆ ಇಲ್ಲ ಎಂದು. ಆದರೆ ಮಾನ್ಯ ಸಹಕಾರ ಖಾತೆ ಸಚಿವರು ಹೇಳುತ್ತಾರೆ, 31ನೇ ತಾರೀಖು ಕೊಡದಿದ್ದರೆ ನಾವು 1ನೇ ತಾರೀಖಿನಿಂದ ಸಾಲವನ್ನು ವಸೂಲ್ಮಾಡುತ್ತೇವೆ ಎಂದು.

(ಗೊಂದಲ)

SRI R. V. DESHPANDE: We want a very categorical and clear statement from the Government whether they exempt them from the loans or not?

ಶ್ರೀ ಕೆ. ಹೆಚ್. ಪಾಟೀಲ್: ನನಗೆ ಗೊತ್ತಿರುವಂತೆ ಮಾನ್ಯ ಮುಖ್ಯ ಮಂತ್ರಿಗಳು ಎಲ್ಲಿಯೂ ಕೂಡ ನಾವು 10 ಸಾವಿರ ರೂಪಾಯಿಯ ಸಾಲವನ್ನು ಸೂಟು ಬಿಡುತ್ತೇವೆಂದು ಹೇಳಿಲ್ಲ. ಸೂಟು ಬಿಡುವುದಕ್ಕೆ ಕೇಂದ್ರ ಸರ್ಕಾರಕ್ಕೆ ನಾವು ಪತ್ರವನ್ನು ಬರೆದಿದ್ದೇವೆ. ಅಲ್ಲಿಂದ ನಮಗೆ ನೆರವು ಬಂದಿಲ್ಲ ಸೂಟು ಬಿಡುತ್ತೇವೆ. ಅದು ಬರುವವರೆಗೂ...

ಶ್ರೀ ಬಿ. ಎಸ್. ಯಡಿಯೂರಪ್ಪ: ಈ ರಾಜ್ಯದ ರೈತ ಓಟು ಕೊಟ್ಟಿರತಕ್ಕದ್ದು ಈ ಸರ್ಕಾರಕ್ಕೇ ಹೊರತು ಕೇಂದ್ರ ಸರ್ಕಾರಕ್ಕಲ್ಲ.

(ಗೊಂದಲ)

ಶ್ರೀ ಕೆ. ಹೆಚ್. ಪಾಟೀಲ್: ನೀವು ಇಷ್ಟು ಹೊಡೆದಾಡುತ್ತೀರಿ. ಅವರು ನಿಮಗೆ ಕೊಟ್ಟಿದ್ದಾರೆ.

ಶ್ರೀ ಬಿ. ಎಸ್. ಯಡಿಯೂರಪ್ಪ: ನಮಗೆ ಕೊಟ್ಟಿಲ್ಲ.

(ಗೊಂದಲ)

ಶ್ರೀ ಕೆ. ಹೆಚ್. ಪಾಟೀಲ್: ಸೂಟು ಕೊಡದಿದ್ದರೆ ಅವರು ಕೋರ್ಟಿಗೆ ಹೋಗುವುದಿಲ್ಲ.

ಶ್ರೀ ಬಿ. ಎಸ್. ಯಡಿಯೂರಪ್ಪ: ನೀವು ರೈತನಿಗೆ ಮೋಸಮಾಡಿದವರು. ನಿಮ್ಮ

ಈ ಮಾತನ್ನು ಕೇಳುವುದಕ್ಕೆ ನಮಗೆ ಇಚ್ಛೆ ಇಲ್ಲ. ಇದನ್ನು ವಾಪಸು ತೆಗೆದುಕೊಳ್ಳಿ...

(ಗೊಂದಲ)

ಅಧ್ಯಕ್ಷರು: ಆರ್ಡರ್, ಆರ್ಡರ್.....ಆರ್ಡರ್...

ಶ್ರೀ ಕೆ. ಹೆಚ್. ಪಾಟೀಲ್: ನಾನು ಯಾವುದನ್ನು ವಾಪಸುತೆಗೆದುಕೊಳ್ಳಲಿ? ರೈತರ ಬೆಂಬಲ ಇಲ್ಲ ಎಂಬುದನ್ನು ವಾಪಸು ತೆಗೆದುಕೊಳ್ಳಲೆ? ನಾನು ಏನನ್ನು ವಾಪಸು ತೆಗೆದುಕೊಳ್ಳಲಿ?

(ಗೊಂದಲ)

ಶ್ರೀ ವಾಟಾಳ್ ನಾಗರಾಜ್: ಈ ಸರ್ಕಾರ ಬಂದಾಗಿನಿಂದ, ಅಂದರೆ ಸುಮಾರು ಒಂದು ವರ್ಷದಿಂದ ಈ ವಿಚಾರ ಪ್ರಸ್ತಾಪವಾಗುತ್ತಿದೆ. ರೈತರ ಬಗ್ಗೆ ಸರ್ಕಾರ ಒಂದು ಸ್ಪಷ್ಟವಾದ ನಿಲುವನ್ನು ತಾಳಬೇಕು.

ಅಧ್ಯಕ್ಷರು: ನಾನು ಯಾರಿಗೂ ಕೂಡ ಅನುಮತಿಯನ್ನು ಕೊಟ್ಟಿಲ್ಲ, ಮಾನ್ಯ ಯಡಿಯೂರಪ್ಪನವರು ಪ್ರಸ್ತಾವನೆ ಮಾಡುವುದಕ್ಕೆ ಮಾತ್ರ ನಾನು ಅನುಮತಿಯನ್ನು ಕೊಟ್ಟಿದ್ದೇನೆ. ಈಗ ಆ ಘಟ್ಟವನ್ನು ಮೀರಿ ಹೋಗಿದೆ.

(ಗೊಂದಲ)

ಶ್ರೀ ಬಿ. ಎಸ್. ಯಡಿಯೂರಪ್ಪ: ಇವತ್ತು ಜನರು ಸ್ಪಷ್ಟವಾಗಿ ಅರ್ಥಮಾಡಿಕೊಂಡಿದ್ದಾರೆ.

(ಗೊಂದಲ)

Mr. Speaker: please do not record

ಶ್ರೀ ಬಿ. ಎಸ್. ಯಡಿಯೂರಪ್ಪ: ಇವರು ರಾಜ್ಯದ ರೈತರಿಗೆ ದ್ರೋಹ ಬಗೆಯುತ್ತಿದ್ದಾರೆ.

(ಗೊಂದಲ)

ಅಧ್ಯಕ್ಷರು: ಮಾನ್ಯ ಸಚಿವರುಗಳು ಕೇಳಬೇಕು. ಅವರು ಇಲ್ಲಿಗೆ ಬಂದು ಮಾತನಾಡುತ್ತಿರುವುದರಿಂದ ಅದು ಯಾವುದೂ ಕೂಡ ಕಡತಕ್ಕೆ ಹೋಗುತ್ತಿಲ್ಲ. ನೀವು ಏತಕ್ಕೆ ಇಷ್ಟು ತಲೆಯನ್ನು ಕೆಡಿಸಿಕೊಳ್ಳುತ್ತಿದ್ದೀರಿ. ಅವರು ಇಲ್ಲಿಂದ ಮಾತನಾಡುವುದು ಯಾವುದೂ ಕೂಡ ಈ ಸಭೆಯ ಅಧಿಕೃತ ನಡವಳಿಕೆಯಾಗುವುದಿಲ್ಲ.

ಶ್ರೀ ವಾಟಾಳ್ ನಾಗರಾಜ್: ಇದು ಸಮಗ್ರ ರೈತರ ಪ್ರಶ್ನೆ.

12.40 ಪಿ. ಎಂ

ತಾವು ಸ್ವಲ್ಪ ಗಮನ ಕೊಡಬೇಕು. ಸರ್ಕಾರದವರು ಬಹಳ ಲಘುವಾಗಬಾರದು. ಇದು ಸರಿಯಾದುದಲ್ಲ.

(ಈ ನಿಟ್ಟಿನಲ್ಲಿ ಬಿ.ಜೆ.ಪಿ.ಸದಸ್ಯರು ಸಭಾತ್ಯಾಗ ಮಾಡುವರು- ಶ್ರೀ ವಾಟಾಳ್ ನಾಗರಾಜ್‌ರವರೂ ಸಭ ತ್ಯಾಗ ಮಾಡುವರು)

ಅಧ್ಯಕ್ಷರು; ರಾಜ್ಯದಲ್ಲಿರುವ ಬರಗಾಲ ಪರಿಸ್ಥಿತಿಯ ಬಗ್ಗೆ ಈಗ ಮಾನ್ಯ ಕಂದಾಯ ಸಚಿವರು ಹೇಳಿಕೆಯನ್ನು ನೀಡುತ್ತಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ: ಮಾನ್ಯ ಅಧ್ಯಕ್ಷರೇ,

(ಗೊಂದಲ)

ಶ್ರೀ ಡಿ. ಬಿ. ಚಂದ್ರೇಗೌಡ: ಮಾನ್ಯ ಅಧ್ಯಕ್ಷರೇ ಈ ಶಾಸನಸಭೆಯಲ್ಲಿ ಇದೇ ವಿಚಾರದಲ್ಲಿ ಒಮ್ಮೆಯಲ್ಲ 10 ಬಾರಿ ಚರ್ಚೆ ಮಾಡಿದ್ದೇವೆ. ಕೇಂದ್ರ ಸರ್ಕಾರ ಏನು ನಿಯಮಗಳನ್ನು ರಚನೆ ಮಾಡಿತ್ತು ಆ ನಿಯಮಗಳನ್ನು ಒಪ್ಪಿಕೊಂಡಿದ್ದೇವೆಂದು ಪ್ರಿನ್ಸಿಪಲಿ

ಎನ್ನುವ ಮಾತನ್ನು ಹಿಂದಿನ ಮುಖ್ಯ ಮಂತ್ರಿಗಳಾದ ಶ್ರೀಮಾನ್ ವೀರೇಂದ್ರ ಪಾಟೀಲರು ಸದನಕ್ಕೆ ಹೇಳಿದರು. ಒಪ್ಪಿಕೊಂಡಮೇಲೆ ನಡವಳಿಕೆ ಏನಾಗಬೇಕು ಎನ್ನತಕ್ಕಂಥದ್ದು? ನಿರ್ದಿಷ್ಟವಾಗಿ ನಿಖರವಾಗಿ ನಿಯಮಗಳನ್ನು ಮಾಡಿದರು. ಇದು ರಾಜ್ಯಕ್ಕೆ ಸೀಮಿತವಾದುದು ಎಂದು ಹೇಳಿದಾಗ ಮೊನ್ನೆ ನಾವು ಒರಿಸ್ಸಾಕ್ಕೆ ಕೂಡ ಹೋದಾಗ ಸರಿಸುಮಾರಾಗಿ ಕೂಡ ಹೇಳಿದ್ದಾರೆ 162 ಕೋಟಿ ರೂಪಾಯಿಗಳವರೆಗೆ ಕೇಂದ್ರ ಸರ್ಕಾರಕ್ಕೆ ಬರೆದು ಪರಿಪೂರ್ಣವಾದ ಲಾಭವನ್ನು ನಾವು ಪಡೆದುಕೊಂಡಿರುತ್ತೇವೆನ್ನುವ ಮಾತನ್ನು ಹೇಳಿದರು. ಬೇರೆ ಬೇರೆ ರಾಜ್ಯಗಳ ವಿಚಾರವನ್ನು ಪ್ರಸ್ತಾಪ ಮಾಡಿ ಎಲ್ಲಾ ರಾಜ್ಯಗಳೂ ಕೂಡ ಕೇಂದ್ರ ಸರ್ಕಾರದ ಸಾಲಮನ್ನಾ ನೀತಿಯನ್ನು ಒಪ್ಪಿಕೊಂಡು ಅದರ ಪರಿಪೂರ್ಣವಾದ ಲಾಭವನ್ನು ಪಡೆದುಕೊಂಡಿರುತ್ತಾರೆ. ಕರ್ನಾಟಕ ರಾಜ್ಯಮಾತ್ರ ಆ ಒಂದು ವಿಚಾರದಲ್ಲಿ ದ್ವಂದ್ವದಲ್ಲಿದೆ. ಈ ದ್ವಂದ್ವವನ್ನು ಪರಿಹರಿಸಲು ಈಗಲೂ ಕೂಡ ಸಾಧ್ಯವಾಗಿಲ್ಲ. ಪುನಃ ವಸೂಲು ಮಾಡುತ್ತೇವೆ, ನಮಗೆ ಅನ್ಯಮಾರ್ಗವಿಲ್ಲವೆಂದು ಹೇಳುತ್ತಿದ್ದಾರೆ. 31 ನೇ ಮಾರ್ಚ್‌ನೊಳಗೆ ವಸೂಲು ಮಾಡುತ್ತೇವೆಂದು ಏನು ಹೇಳುತ್ತಿರುತ್ತಾರೆ ಇದನ್ನು ನಾವು ಬಹಳ ಉಗ್ರವಾಗಿ ಪ್ರತಿಭಟನೆ ಮಾಡಬೇಕಾಗಿದೆ.

ಶ್ರೀ ಎಂ. ವೀರಪ್ಪ ಮೊಯಿಲಿ: ಈಗ ತಾವು ಸ್ವಲ್ಪ ಸಾವಧಾನವಾಗಿ ಕೇಳುವುದಾದರೆ ...ಏತಕ್ಕೆಂದರೆ ಸನ್ಮಾನ್ಯ ಅಧ್ಯಕ್ಷರೇ ಇವತ್ತಿನ ದಿವಸ ಸಾಮಾನ್ಯವಾಗಿ ನಾವು ರಾಜ್ಯಪಾಲರ ಭಾಷಣದ ಬಗ್ಗೆ ವಂದನಾ ನಿರ್ಣಯದ ಬಗ್ಗೆ ಚರ್ಚೆ ಮಾಡತಕ್ಕಂಥದ್ದು ಪರಂಪರಾಗತವಾಗಿ ನಡೆದುಕೊಂಡು ಬಂದಿರತಕ್ಕಂಥದ್ದು. ಆದರೂ ಕೂಡ ಆ ಪರಂಪರೆಯನ್ನು ಮೀರಿ ನಾವು ಹೋಗಿದ್ದೇವೆ. ಈ ರಾಜ್ಯದಲ್ಲಿ ಇರತಕ್ಕಂಥ ಬರಗಾಲದ ಪರಿಸ್ಥಿತಿಗೆ ಪ್ರಥಮ ಆದ್ಯತೆಯನ್ನು ಕೊಟ್ಟು ಆನಂತರ ರಾಜ್ಯಪಾಲರ ವಂದನಾ ನಿರ್ಣಯವನ್ನೋ ಚರ್ಚೆ ಮಾಡಬೇಕೆಂದು ಹೇಳಿದ್ದಕ್ಕೆ ನಾವೆಲ್ಲರೂ ಒಪ್ಪಿಕೊಂಡಿದ್ದೇವೆ. ಆಗ ನಾವು ಏನು ಹೇಳಿದ್ದೆ ಎಂದರೆ ನಿಲುವಳಿ ಸೂಚನೆ ಇದಕ್ಕೆ ಬೇಕಾಗಿಲ್ಲ ಸರ್ಕಾರ ಒಪ್ಪಿದೆ ಆದ್ಯತೆ ಕೊಟ್ಟು ಚರ್ಚೆ ಮಾಡೋಣವೆಂದು ಹೇಳಿ, ಅದರಂತೆ ಇವತ್ತು ಚರ್ಚೆಗೆ ಸೇರಿದ್ದೇವೆ.

ಶ್ರೀ ವಾಟಾಳ್ ನಾಗರಾಜ್: ಮಾನ್ಯ ಅಧ್ಯಕ್ಷರೆ ಸಮಿತಿಯ ಸಭೆಯನ್ನು ಕರೆದಾಗ ನಾವು ಅಲ್ಲಿ ನಿಲುವಳಿ ಸೂಚನೆಯನ್ನು ತರುತ್ತೇವೆ ಅಭಾಪರಿಸ್ಥಿತಿಯ ಬಗ್ಗೆ ಚರ್ಚೆ ಮಾಡಬೇಕಾಗುತ್ತದೆಂದು ಹೇಳಿದಾಗ ಸರ್ಕಾರ ಒಂದು ನಿರ್ಣಯವನ್ನು ಕೊಡುತ್ತದೆ, ಆಮೇಲೆ ಚರ್ಚೆ ಮಾಡೋಣವೆಂದು ಹೇಳಿದಿರಿ. ಅದು ಮೂಲ ಉದ್ದೇಶ. ನಿಮ್ಮದಲ್ಲ.

ಶ್ರೀ ಎಂ. ವೀರಪ್ಪ ಮೊಯಿಲಿ: ತಾವೇ ಆ ಕೀರ್ತಿಗೆ ಭಾಜನರಾಗಬಹುದು. ಅದನ್ನು ನಾವು ಹಂಚಿಕೆ ಮಾಡಿಕೊಳ್ಳುವುದಕ್ಕೆ ಹೋಗುವುದಿಲ್ಲ. ಆಗಲಿ ಆ ಕೀರ್ತಿಗೆ ತಾವೇ ಭಾಜನರಾಗಿ, ಬರಗಾಲದ ಬಗ್ಗೆ ಚರ್ಚೆಯಾಗಬೇಕೆಂದು ಹೇಳಿ ತಮ್ಮ ಒತ್ತಾಯದ ಮೇಲೆ ಮಾಡುತ್ತಿರುವಾಗ ಏನು ನಡೆಯುತ್ತಿದೆ ಇಲ್ಲಿ. ಸನ್ಮಾನ್ಯ ಸದಸ್ಯರಾದ ಯಡಿಯೂರಪ್ಪನವರನ್ನು ಕೇಳಬೇಕಾಗಿದೆ ಬರಗಾಲದ ವಿಚಾರದ ಬಗ್ಗೆ ಪ್ರಸ್ತಾಪ ಮಾಡುವುದು ಬೇಕಾಗಿಲ್ಲ? ಅವರು ಕನಿಷ್ಟ ಮಟ್ಟದ ಸೌಜನ್ಯತೆಯನ್ನಾದರೂ ತೋರಿಸಬೇಕು. ಏತಕ್ಕೆಂದರೆ ಬರಗಾಲದ ಬಗ್ಗೆ ಹೇಳಿಕೆಯನ್ನು ಕೊಡಲಿಕ್ಕೆ ಮಾನ್ಯ ಕಂದಾಯ ಸಚಿವರು ಸಿದ್ದರಿದ್ದಾರೆ. ಬರಗಾಲದ ಬಗ್ಗೆ ಚರ್ಚೆಯಾಗಬೇಕೆಂದು ಹೇಳಿ ಎಲ್ಲಾ ವಿಚಾರಗಳನ್ನು ಬಿಟ್ಟು, ಕೆಲವು ಪರಂಪರೆಗಳನ್ನು ಬಿಟ್ಟು ಇವತ್ತು ಚರ್ಚೆಗೆ ಇಳಿದಿದ್ದೇವೆ.

(ಈ ನಿಟ್ಟಿನಲ್ಲಿ ಬಿ.ಜೆ.ಪಿ. ಸದಸ್ಯರು ಮರಳಿಬಂದು ತಮ್ಮ ಪೀಠವನ್ನು ಅಲಂಕರಿಸಿದರು)

ಇಲ್ಲಿ ಈಗ ಹೇಳಿಕೆ ಸಿದ್ದವಾಗಿದೆ. ಅದರ ಮೇಲೆ ಚರ್ಚೆ ಮಾಡಬಹುದು. ಬಹುಶಃ ರೈತರ ಸಮಸ್ಯೆ ಪ್ರತ್ಯೇಕವಲ್ಲ, ಬರಗಾಲದ ವಿಚಾರ ಪ್ರತ್ಯೇಕವಲ್ಲ, ಎರಡೂ

ಸಮನ್ವಯವಾಗತಕ್ಕ ವಿಚಾರಗಳು ತಾವು ಎಷ್ಟೇ ತೀವ್ರವಾಗಿ, ವೇಗವಾಗಿ ಅಥವಾ ತೀವ್ರ ಅನುಕಂಪದಿಂದ ರೈತರ ವಿಚಾರವನ್ನೇ ಪ್ರಸ್ತಾಪ ಮಾಡಿದರೂ ಅದರಲ್ಲಿ ರಾಜಕೀಯವನ್ನು ಬೆರಸುವುದು ಸರಿಯಲ್ಲ. ಮೊದಲ ಪ್ರಾಶಸ್ತ್ಯ ಬರಗಾಲ ಅಥವಾ ಸಾಲ ಮನ್ನಾ ವಿಚಾರಗಳಿಗೆ ಕೊಡಬೇಕೆನ್ನುವುದಾದರೆ ತಾವು ಹೇಳುವುದು ಸರಿ.

ಶ್ರೀ ಬಿ. ಎಸ್. ಯಡಿಯೂರಪ್ಪ: ಪಾರ್ಲಿಮೆಂಟರಿ ಸಿಸ್ಟಂನಲ್ಲಿ ನೀವು ಏನು ಬೇಕಾದರೂ ಹೇಳಬಹುದೆ?

ಶ್ರೀ ಎಂ. ವೀರಪ್ಪ ಮೊಯಿಲಿ: ರೈತರ ಬಗ್ಗೆ ಕಳಕಳಿ ತಾಳಿ, ಬರಗಾಲದಿಂದ ಕಂಗಾಲಾಗಿರತಕ್ಕ ಜನರ ಬಗ್ಗೆ ನಾವು ಇವತ್ತು ಪ್ರಥಮ ಪ್ರಾಶಸ್ತ್ಯ ಕೊಟ್ಟು ಚರ್ಚೆ ಮಾಡಬೇಕೆಂದಿದ್ದಾಗ ಅದಕ್ಕೆ ಯಾರು ತಡೆ ಮಾಡಿದರು? ಇದರ ಬಗ್ಗೆ ನಾನು ಯಾರೂ ತಡೆ ಮಾಡಲಿಲ್ಲ.

ಶ್ರೀ ಬಿ. ಎಸ್. ಯಡಿಯೂರಪ್ಪ: ಬರಗಾಲದ ಬಗ್ಗೆ ಚರ್ಚೆಯಾಗಬೇಕೆಂದು ಅಧ್ಯಕ್ಷರ ಗಮನ ಸೆಳೆದವನು ನಾನು. ಮಾನ್ಯ ಅಧ್ಯಕ್ಷರ ಕೊಠಡಿಯಲ್ಲಿ ಒಂದನೇ ತಾರೀಖು ಯಾವ ವಿಚಾರಗಳನ್ನು ಪ್ರಸ್ತಾಪ ಮಾಡಬೇಕೆಂದು ಬಂದಾಗ, ಈ ರಾಜ್ಯದಲ್ಲಿ ಬರಗಾಲದ ವಾತಾವರಣ ಇದೆ, ಅದಕ್ಕೆ ಹೆಚ್ಚಿನ ಪ್ರಾಶಸ್ತ್ಯವನ್ನು ಕೊಡಬೇಕು, ರಾಜ್ಯಪಾಲರ ಭಾಷಣದ ಮೇಲಿನ ಚರ್ಚೆಗೂ ಮುಂಚೆ ಇದರ ಬಗ್ಗೆ ಚರ್ಚೆಯಾಗಬೇಕೆಂದು ಮಾನ್ಯ ಅಧ್ಯಕ್ಷರ ಮತ್ತು ಮಾನ್ಯ ಮುಖ್ಯ ಮಂತ್ರಿಯವರ ಗಮನ ಸೆಳೆದು ಒಪ್ಪಿಗೆ ತೆಗೆದುಕೊಂಡದ್ದು ಯಡಿಯೂರಪ್ಪನ ಪ್ರಯತ್ನದಿಂದ ಹೀಗಿರಬೇಕಾದರೆ ಗುರುತರವಾದ ಆರೋಪ ಮಾಡಿ ಯಡಿಯೂರಪ್ಪನವರಿಗೆ ಬರಗಾಲದ ಬಗ್ಗೆ ಕಳಕಳಿ ಇಲ್ಲವೆಂದು ಹೇಳುವುದು ಹಿರಿಯ ಸಚಿವರಿಗೆ ಗೌರವ ತರತಕ್ಕದ್ದಲ್ಲ. ಇದೇ ರಾಜಕೀಯ. ಬರಗಾಲದ ಬಗ್ಗೆ ನಾವೇ ಸ್ಟೇಟ್‌ಮೆಂಟ್ ಮಾಡುತ್ತೇವೆಂದು ಹೇಳಲಿಲ್ಲ. ನಾನು ಅಧ್ಯಕ್ಷರ ಗಮನ ಸೆಳೆದು ಒತ್ತಾಯ ತಂದ ಮೇಲೆ ಅಧ್ಯಕ್ಷರು ಸರ್ಕಾರಕ್ಕೆ ಆದೇಶ ಕೊಟ್ಟರು. ನಾನು ಈ ವಿಚಾರವನ್ನು ಪ್ರಸ್ತಾಪ ಮಾಡಿದ ಮೇಲೆ ನಿಮ್ಮಂಥವರು ಈ ರೀತಿ ಸದನದಲ್ಲಿ ಆರೋಪಣೆ ಮಾಡುವುದು ಏನಿದೆ ಇದೇ ರಾಜಕಾರಣ. ಈ ರಾಜಕಾರಣದಿಂದ ನೀವು ಬಹಳ ದಿವಸ ಮುಂದುವರಿಯುವುದಿಲ್ಲ. ಬರೀ ಮೊಸಳೆ ಕಣ್ಣೀರು ಹಾಕುವುದನ್ನು ಜನರು ಅರ್ಥ ಮಾಡಕೊಂಡಿದ್ದಾರೆ. ಜನರಿಗೆ ಇವತ್ತಿನ ದಿವಸ ಅರ್ಥ ಮಾಡಿಕೊಳ್ಳುವ ಶಕ್ತಿ ಇದೆ.

ಶ್ರೀ ಎಂ. ವೀರಪ್ಪ ಮೊಯಿಲಿ: 40 ವರ್ಷಗಳ ಕಾಲ ಕರ್ನಾಟಕ ರಾಜ್ಯದಲ್ಲಿ ಮಾನ್ಯ ಯಡಿಯೂರಪ್ಪನವರ ವಾದವನ್ನು ಜನರು ಅರ್ಥ ಮಾಡಿಕೊಂಡಿದ್ದಾರೆ. ಯಾರು ಏನು ಅರ್ಥ ಮಾಡಿಕೊಂಡಿದ್ದಾರೆಂಬುದು ರಾಜ್ಯದ ಜನತೆಗೆ ಮತ್ತು ಈ ಸದನಕ್ಕೆ ಬಿಟ್ಟದ್ದು. ಮಾನ್ಯ ಯಡಿಯೂರಪ್ಪನವರು ಮಾತನಾಡಲು ನಿಂತಾಗ ತಾವು ಅನುಮತಿ ಕೊಟ್ಟಿರಿ. ಅದಕ್ಕೆ ಸನ್ಮಾನ್ಯ ಸಚಿವರು ಉತ್ತರಿಸಿದರು. ಇವತ್ತು ನಾವು 4ನೇ ತಾರೀಖಿನಲ್ಲಿದ್ದೇವೆ. ಈ ಸದನದಲ್ಲಿ ಸರ್ಕಾರ ಮಾತು ಕೊಟ್ಟಿದೆ. ಕಂದಾಯ ಸಚಿವರು ಮತ್ತು ಮುಖ್ಯಮಂತ್ರಿಗಳು 31 ರವರೆಗೆ ಸಾಲ ವಸೂಲ್ಮಾಡುವುದಿಲ್ಲವೆಂದು ಮಾತು ಕೊಟ್ಟಿದ್ದಾರೆ. ಕೇಂದ್ರ ಸರ್ಕಾರಕ್ಕೆ ಕೆಲವು ಸ್ಪಷ್ಟೀಕರಣಕ್ಕೆ ಬರೆದಿದ್ದೇವೆ. ಈ ಸದನದಲ್ಲಿ ಹಿಂದಿನ ಮುಖ್ಯಮಂತ್ರಿಯವರು ಮತ್ತು ಈಗಿನ ಮುಖ್ಯ ಮಂತ್ರಿಯವರು ಮಾತು ಕೊಟ್ಟಿದ್ದಾರೆ. ಕೇಂದ್ರ ಸರ್ಕಾರದವರು ಏನು ರಿಯಾಯಿತಿ ಕೊಟ್ಟಿದ್ದಾರೆ ಅದರ ಬಗ್ಗೆ ನಾವು ಯಾವ ರೀತಿ ಸ್ಪಂದಿಸುತ್ತೇವೆಂಬುದನ್ನು ಹೇಳತಕ್ಕ ಮಾತನ್ನು ಹಿಂದಿನ ಮತ್ತು ಇಂದಿನ ಮುಖ್ಯ ಮಂತ್ರಿಗಳು ಹೇಳಿದ್ದಾರೆ. ಆ ನೀತಿಯ ಬಗ್ಗೆ ನಮ್ಮಲ್ಲಿ ಯಾವುದೇ ರೀತಿಯ ಶಿಥಿಲತೆ ಇಲ್ಲ, ನಮ್ಮ ಹೇಳಿಕೆಯಲ್ಲಾಗಲಿ, ನೀತಿಯಲ್ಲಾಗಲಿ ದ್ವಂದ್ವ ಇಲ್ಲ. ಮಾನ್ಯ ವಿರೋಧ ಪಕ್ಷದವರು ಒಂದನ್ನು ಗಮನಿಸಬೇಕು. ಕೇಂದ್ರ ಸರ್ಕಾರದ ನೀತಿ ಏನಿದೆ ಅದರ ಬಗ್ಗೆ ನಾವು ಚಂಚಲವಾಗಿಲ್ಲ. ನಮ್ಮದೂ ಅದೇ

ನೀತಿಯಾಗಿದೆ. ಈಗ ಪ್ರಶ್ನೆ ಏನೆಂದರೆ, ಇದರ ಬಗ್ಗೆ ನಾವು ಕೆಲವು ಸ್ಪಷ್ಟೀಕರಣವನ್ನು ಕೇಳಿದ್ದೇವೆ. ಇನ್ನೂ ಸಾಕಷ್ಟು ಅವಕಾಶ ಇದೆ. ಏನಿದ್ದರೂ ಒಂದನೇ ತಾರೀಖು ಮೇಲೆ ವಸೂಲ್ಮಾಡಬೇಕಾಗುತ್ತದೆ. ಒಂದು ವೇಳೆ ಉತ್ತರ ಬರಲಿಲ್ಲವೆಂದರೆ ಆಗ ನಾವು ಎನು ಮಾಡಬೇಕೆಂದರೆ 21ರವರೆಗೆ ಈ ಸದನ ನಡೆಯುತ್ತದೆ, ಆಷ್ಟರಲ್ಲಿ ಒಂದು ತೀರ್ಮಾನ ತೆಗೆದುಕೊಳ್ಳಬಹುದು. ರೈತರ ಬಗ್ಗೆ ನಿಮಗೆ ಎಷ್ಟು ಕಳಕಳಿ ಇದೆಯೋ ಅದಕ್ಕಿಂತ ಹೆಚ್ಚು ಎಂದು ತಾವು ಒಪ್ಪದಿದ್ದರೂ ಆಷ್ಟರಮಟ್ಟಿಗೆ ಕಳಕಳಿ ಇದೆ. ಈ ಬಗ್ಗೆ ವಿಚಾರ ಮಾಡೋಣ. ಒಂದನೇ ತಾಲೀಖು ನಡೆಯತಕ್ಕ ಘಟನೆಗಳ ಬಗ್ಗೆ ಇವತ್ತೇ ತಾವು ತೀರ್ಮಾನ ಮಾಡಬೇಕೆಂದು ಹೇಳಿ, ಯಾವ ಕಾರ್ಯಕ್ರಮಗಳನ್ನು ನಡೆಯುವುದಕ್ಕೆ ಬಿಡುವುದಿಲ್ಲವೆಂದು ಹೇಳಿದರೆ ಅದು ಉಚಿತವಾದ ಕಾರ್ಯಕ್ರಮವಾಗುವುದಿಲ್ಲ.

ಶ್ರೀ ಬಿ. ಎಸ್. ಯಡಿಯೂರಪ್ಪ: ನಾವು ಧರಣಿ ಕುಳಿತುಕೊಳ್ಳಬೇಕೆಂದು ನಿಮ್ಮ ಅಪೇಕ್ಷೆಯೆ? ನಾನು ಮರ್ಯಾದೆಯಿಂದ ಸರ್ಕಾರದ ಗಮನ ಸೆಳೆದು ವಾಕ್‌ಔಟ್ ಮಾಡಿದ್ದೇನೆ. ಧರಣಿ ಕೂರಬೇಕೆಂದರೆ ಕೂರೋಣ.

ಶ್ರೀ ಎಂ. ವೀರಪ್ಪ ಮೊಯಿಲಿ: ಈ ಸಂಪ್ರದಾಯ ಸರಿಯಲ್ಲ. ಏಕೆಂದರೆ ಒಬ್ಬರು ಮಾತನಾಡುವಾಗ ಆಗಾಗ ಎದ್ದುನಿಂತು ಮಾತನಾಡಿದರೆ ನಮ್ಮ ವಿಚಾರಗಳನ್ನೂ ಹೇಳುವುದಕ್ಕಾಗುವುದಿಲ್ಲ ನಿಮ್ಮ ವಿಚಾರವನ್ನೂ ತಿಳಿದುಕೊಳ್ಳುವುದಕ್ಕಾಗುವುದಿಲ್ಲ ನಾವು. ದಯಮಾಡಿ ನಾನು ಹೇಳುವುದು ಈಗಿನ ಮಟ್ಟಿಗೆ ಹೇಳುವುದಾದರೇ 21ನೇ ತಾರಿಖಿನವರೆಗೂ ಸಾಕಷ್ಟು ಅವಕಾಶ ಇದೆ. ಸರ್ಕಾರದ ನೀತಿ ಏನಿದೆ ಎಂಬುದನ್ನು.....

ಶ್ರೀ ಬಿ.ಎಸ್. ಯಡಿಯೂರಪ್ಪ: ಸನ್ಮಾನ್ಯ ಅಧ್ಯಕ್ಷರೇ ರೈತರ ಸಾಲ ಮನ್ನಾ ಮಾಡಿಸುತ್ತಾರೆ ಎಂದು ಮುಖ್ಯಮಂತ್ರಿ ಸ್ಥಾನದಿಂದ ಇಳಿಸಿ ಆ ಸ್ಥಾನವನ್ನು ಹಿಡಿಯಬೇಕು ಎಂದು ಏನಾದರೂ ಷಡ್ಯಂತ್ರ ನಡೆಯುತ್ತಿದೆಯೆ? ನನಗೆ ಭಯ ಇರುವುದು ಇದು. ಮುಖ್ಯಮಂತ್ರಿಗಳು ಸಾಲ ಮನ್ನಾ ಮಾಡಿದರೆ ಅವರೇ ಆ ಸ್ಥಾನದಲ್ಲಿ ಮುಂದುವರೆಯಬಹುದು ಎಂದು ಅವರನ್ನು ಅಡ್ಡದಾರಿ ಹಿಡಿಸಿ ರಾಜ್ಯದ ಜನತೆಗೆ ದ್ರೋಹ ಮಾಡಬೇಕು ಎಂಬ ಕುತಂತ್ರ ಏನಾದರೂ ನಡೆಯುತ್ತಿದ್ದೆಯೆ? ಏಕೆಂದರೆ ಮುಖ್ಯಮಂತ್ರಿಗಳಿಗೆ ಕಳಕಳಿ ಇದೆ. ಅವರು ಸಾಲ ಮನ್ನಾ ಮಾಡಿದರೆ ಒಳ್ಳೆಯ ಹೆಸರು ಬರುತ್ತಿದೆ. ವೀರೆಂದ್ರ ಪಾಟೀಲರು ಮುಖ್ಯ ಮಂತ್ರಿಗಳಾಗಿ ಇದೇ ಕೆಲಸ ಮಾಡಿದರು. ಅವರಿಂದ ಒಳ್ಳೆಯ ಕೆಲಸ ಮಾಡಿಸುವುದಕ್ಕೆ ಬಿಡಲಿಲ್ಲ,ಬಂಗಾರಪ್ಪನವರಿಂದಲೂ ಅದೇ ಕೆಲಸ ಮಾಡಿಸಿ ಕುರ್ಚಿ ಹಿಡಿಯುವ ಪ್ರಯತ್ನ ಇದೆಯೇ ಎಂಬ ಅನುಮಾನ ಬರುತ್ತಿದೆ.

ಶ್ರೀ ಎಂ ವೀರಪ್ಪ ಮೊಯಿಲಿ: ಅಧ್ಯಕ್ಷರೆ 21ನೇ ತಾರೀಖಿನವರೆಗೆ ಸದನ ಇದೆ ಇದರ ಬಗ್ಗೆ ಅವರ ವಿಚಾರ ಏನಿದೆ ಎಂಬುದನ್ನು ನಾವು ಗ್ರಹಿಸುತ್ತೇವೆ. ಸನ್ಮಾನ್ಯ ಮುಖ್ಯಮಂತ್ರಿಗಳು ಕೂಡ ನಾಳೆ ಬರುತ್ತಾರೆ. ಇದರ ಬಗ್ಗೆ ಏನು ಮಾಡಬೇಕು ವಿಚಾರ ಮಾಡುತ್ತೇವೆ. ನಾಳೆಯೇ ನಾವು ವಸೂಲು ಮಾಡುತ್ತೇವೆ ಎಂದು ಹೆಳಿದರೆ ಅಥವಾ ಇವತ್ತೇ ವಸೂಲಿಗೆ ಪ್ರಾರಂಭ ಮಾಡುತ್ತೇವೆಂದು ಹೇಳಿದರೆ ತಾವು ಹೇಳುವ ಆತುರವನ್ನು ನಾವು ಒಪ್ಪಿಕೊಳ್ಳುತ್ತೇವೆ. ಆ ಪ್ರಶ್ನೆ ಇಲ್ಲ ಸನ್ಮಾನ್ಯ ಸಚಿವರು ಒಂದನೇಯ ತಾರೀಖಿನ ಮೇಲೆ ನೋಡಬೇಕು ಎಂದು ಹೇಳಿದ್ದಾರೆ. ಆದ್ದರಿಂದ ಸ್ಪಷ್ಟೀಕರಣ ಬರಬಹುದು ಎಂದು ಆಸೆ ಇಟ್ಟುಕೊಂಡಿದ್ದೇವೆ. It is left to the Government to take appropriate decision in response to the wishes of the farmers. ರೈತರ ಒಂದು ಅಭಿಪ್ರಾಯ ಅವರ ಕಷ್ಟ ಸಂಕಷ್ಟ ಮತ್ತು ಅವರ ಪರಿಸ್ಥಿತಿಯನ್ನು ಗ್ರಹಿಸಿಕೊಂಡು ರೈತರ ಕಳಕಳಿಗೆ ಸ್ಪಂದಿಸತಕ್ಕ ಸರ್ಕಾರ ಇಲ್ಲಿದೆ. ನಾವು ಎಲ್ಲೂ ಹೋಗುವುದಿಲ್ಲ, ಆದ್ದರಿಂದ ಇದರ ಬಗ್ಗೆ ಬೇಕಾದರೆ ಒಂದು ದಿವಸ ಚರ್ಚೆ ಮಾಡೋಣ ತಾವೇ ಹೇಳಿದ್ದೀರಿ ಸನ್ಮಾನ್ಯ ಮುಖ್ಯಮಂತ್ರಿಯವರು

ಮುಂದಿವರೆಯಬೇಕು, ಅವರು ರೈತರ ಪರವಾಗಿದ್ದಾರೆ ಎಂದು. ತಾವೇ ತಮ್ಮ ಸಹೃದಯತೆಯನ್ನು ಶುಭ ವಾರ್ತೆಯನ್ನು ಶುಭಾಶಯವನ್ನು ಮಾಡಿದ್ದೀರಿ.

ಶ್ರೀ ವಾಟಾಳ್ ನಾಗರಾಜ್: ಅವರ ಶುಭವಾರ್ತೆ ನಿಮ್ಮಲ್ಲಿ ಎಷ್ಟು ಜನರಿಗೆ ಹಿಡಿಸುತ್ತದೆಯೋ ಎಂಬ ಸಂಶಯ.

ಶ್ರೀ ಎಂ. ವೀರಪ್ಪಮೊಯಿಲಿ: ನಮ್ಮ ಶುಭಾಶಯಕ್ಕೂ ತಮ್ಮ ಶುಭಾಶಯಕ್ಕೂ ಏನೂ ವ್ಯತ್ಯಾಸ ಇಲ್ಲ. ಆದ್ದರಿಂದ ಇದರ ಬಗ್ಗೆ ಸ್ಪಷ್ಟವಾದ ನೀತಿಯನ್ನು ಸದನ ಏಳುವ ಮೊದಲು ಖಂಡಿತ ಹೇಳುತ್ತೇವೆ. ತಮ್ಮನ್ನು (ಶ್ರೀ ಬಿ.ಎಸ್.ಯಡಿಯೂರಪ್ಪನವರನ್ನು) ಪ್ರೊಫೆಸರ್ ನಂಜುಂಡಸ್ವಾಮಿ ಅವರನ್ನು ವಿರೋಧಪಕ್ಷದವರನ್ನು ವಿಶ್ವಾಸಕ್ಕೆ ತೆಗೆದುಕೊಂಡೇ ಏನಾದರೂ ಮಾಡುತ್ತೇವೆಯೇ ಹೊರತು ಒಮ್ಮೆಲೇ ಉಗ್ರವಾದ ಕಾರ್ಯಕ್ರಮವನ್ನು ರೈತರ ಮೇಲೆ ಮಾಡತಕ್ಕ ಚರ್ಯೆ ಅಥವಾ ನೀತಿ ನಮ್ಮ ಸರ್ಕಾರದಲ್ಲಿ ಇಲ್ಲ. ಆದ್ದರಿಂದ ಅನುಮಾನ ಮಾಡಬೇಡಿ.

ಶ್ರೀ ವಾಟಾಳ್ ನಾಗರಾಜ್: ಅಧ್ಯಕ್ಷರೆ ನಾನು ತಮಗೊಂದು ಪತ್ರ ಬರೆದಿದ್ದೆ. ಬೆಂಗಳೂರು ನಗರದಲ್ಲಿ ವಾರಕ್ಕೆ ಒಂದು ಸಾರಿ ನೀರು ಕೊಡುತ್ತೇವೆಂದು ಸರ್ಕಾರ ಹೇಳಿದೆ. ಅದರ ಬಗ್ಗೆ ಸರ್ಕಾರದ ನಿಲುವು ಏನಿದೆ? ಬೆಂಗಳೂರಿನ ಇತಿಹಾಸದಲ್ಲೇ ಈರೀತಿ ಆಗಿಲ್ಲ. ಅದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಇವತ್ತಿನ ಪರಿಸ್ಥಿತಿ ಅತ್ಯಂತ ಶೋಚನೀಯವಾಗಿದೆ. ಸರ್ಕಾರ ಏನಾದರೂ ಒಂದು ನೀತಿ ಹೇಳಬೇಕು. ಜಲ ಮಂಡಲಿಯವರು ಹೇಳುತ್ತಿದ್ದಾರೆ ವಾರಕ್ಕೊಂದು ಸಾರಿ ನೀರು ಕೊಡುತ್ತೇವೆಂದು ಬೆಂಗಳೂರು ನಗರದಲ್ಲಿ ಈ ಪರಿಸ್ಥಿತಿ ಎಂದೂ ಉದ್ಭವವಾಗಿರಲಿಲ್ಲ.

ಅಧ್ಯಕ್ಷರು: ಈಗ ಗಮನ ಸೆಳೆಯುವ ಸೂಚನೆಗಳು ಶ್ರೀ ಆರ್.ವಿ.ದೇಶಪಾಂಡೆ ಅವರು.

SRI R.V.DESHPANDE: Sir, I call the attention of Minister for Housing & Urban Development regarding hardship caused to the public due to improper supply of drinking water in Bangalore City.

ಶ್ರಿ ಕೆ.ಎಸ್. ಈಶ್ವರಪ್ಪ: ಬೆಂಗಳೂರು ನಗರದಲ್ಲಿ ಇಷ್ಟು ಸಮಸ್ಯೆ ಇರುವಾಗ ಬೇರೆ ಕಡೆ ಹೇಗೆ?

ಶ್ರೀ ಕೆ.ಜೆ. ಜಾರ್ಜ್: ಅದಕ್ಕೆ ಸ್ವಲ್ಪ ಟೈಮ್ ಬೇಕು.

ಅಧ್ಯಕ್ಷರು : ದೇಶಪಾಂಡೆಯವರೆ, ಟೈಮ್ ಬೇಕಂತೆ. ಮಧ್ಯಾಹ್ನ ತೆಗೆದುಕೊಳ್ಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್: ಬೆಂಗಳೂರಿನ ಕುಡಿಯುವ ನೀರಿನ ಬಗ್ಗೆ ಸರ್ಕಾರದ ನಿಲುವು ಸ್ಪಷ್ಟವಾಗಬೇಕು. ಎರಡು ದಿವಸಕ್ಕೊಂದು ಸಾರಿ ವಾರಕ್ಕೊಂದು ಸಾರಿ ಎಂದು ಹೇಳಿದರೆ

ಅಧ್ಯಕ್ಷರು: ನಿಯಮ 334ರ ಮೇಲಿನ ಚರ್ಚೆ

ಶ್ರೀ ವಾಟಾಳ್ ನಾಗರಾಜ್: ಪ್ರತಿನಿತ್ಯ ಬೆಂಗಳೂರು ನಗರಕ್ಕೆ ನೀರು ಕೊಡಬೇಕು. ಕೊಡದಿದ್ದರೆ ನಾನು ಇಲ್ಲಿ ಧರಣಿ ಕುಳಿತುಕೊಳ್ಳುತ್ತೇನೆ.

ನಿಯಮ 334ರ ಮೇರೆಗೆ

ಬೀದರ್ ಜಿಲ್ಲೆಗೆ ಪರಿಶಿಷ್ಟ ಜಾತಿ ಮತ್ತು ವರ್ಗಗಳ ವಿದ್ಯಾರ್ಥಿ ನಿಲಯಗಳ ಮಂಜೂರು

ಶ್ರೀ ಬಸವರಾಜ ಪಾಟೀಲ್ ಅಟ್ಟೂರ್: ಮಾನ್ಯ ಅಧ್ಯಕ್ಷರೇ ಕರ್ನಾಟಕ ರಾಜ್ಯದಲ್ಲಿ ಒಟ್ಟು 55 ಪರಿಶಿಷ್ಟಜಾತಿ ಮತ್ತು ಪಂಗಡದ ವಿದ್ಯಾರ್ಥಿನಿಲಯಗಳನ್ನು ಮಂಜೂರು